ಮಗನ ಈ ಪ್ರತಿಕ್ರಿಯೆ ಮಾಯಿಲನಿಗೆ ಹೊಸ ಉಸಿರು ನೀಡಿದಂತಿತ್ತು. ಮಗ ಒಪ್ಪಿದ್ದೇ ಹೆಚ್ಚು. ಹಿಂದೆ ಮುಂದೆ ನೋಡದೆ ನೇರ ಮನೆಯ ತಡಮೆ ದಾಟಿ ಚಾವಡಿ ಹೊಕ್ಕು ಚಾವಡಿಯಲ್ಲಿದ್ದ ಕಲೆಂಬಿಯ ಬಾಗಿಲು ತೆರೆದು ಇಪ್ಪತ್ತರ ಎರಡು ನೋಟುಗಳನ್ನು ಕೃಷ್ಣನ ಕೈಗಿಟ್ಟರೂ ಕೃಷ್ಣಪ್ಪ ಕದಲುತ್ತಿಲ್ಲ. 'ಇಷ್ಟೊಂದು ಹಣಕ್ಕೆ ದುಗ್ಗ ಬರುವವನಲ್ಲ, ಸರಿಯಾಗಿ ಮುಂಗಡ ಕೊಟ್ಟರೆ ಮಾತ್ರ ಹೋದೇನು, ಆತನಿಗೆ ಕೊಟ್ಟೇನು' ಎಂದು ಗದರಿಸುವ ಧ್ವನಿಯಲ್ಲೇ ಪ್ರತಿಕ್ರಿಯಿಸಿದ ಕೃಷ್ಣಪ್ಪ.

'ಇವನಿಗೆ ದುಗ್ಗನಿಗೆ ಅಡ್ವಾನ್ಸ್ ಕೊಟ್ಟರೆ ಹೇಗೆ? ದುಗ್ಗನಿಗೆ ಅರ್ಧ ಕೊಟ್ಟು ಉಳಿದರ್ಧವನ್ನು ಗಡಂಗಿಗೆ ಸುರಿಯಬಹುದೇ? ಈತ' ಎನ್ನುವ ದ್ವಂದ್ವ ಮಾಯಿಲನನ್ನ ಕ್ಷಣಕಾಲ ಕಾಡದಿರಲಿಲ್ಲ. ತಾನೇ ಹೋಗಿ ದುಗ್ಗನನ್ನು ಮಾತಾಡಿಸಿ, ಒಪ್ಪಿಸಿ ಬರುವ ಹಾಗಿಲ್ಲ, ಕೃಷ್ಣಪ್ಪನೇ ಗತಿ. ಸಂಶಯಿಸಿಕೊಂಡೇ ನಿರ್ವಾಹವಿಲ್ಲದೆ ಅಡ್ವಾನ್ಸ್ ಹಣವನ್ನು ಕೊಟ್ಟೇ ಬಿಟ್ಟ. ಹಾಗೆಯೇ ವಾದ್ಯದ ಪದ್ಮಪ್ಪ, ಭೂತದ ಪೂಜಾರಿ ಕೊರಗ ಮೂಲ್ಯಮಧು ಹೇಳುವ ಸೋಮಪ್ಪ, ದೀವಟಿಗೆ ಹಿಡಿಯುವ ಸೇಸಪ್ಪ... ಇವರಿಗೆಲ್ಲ ತಿಳಿಸಿ ಬರುವ ಕರ್ತವ್ಯವನ್ನೂ ಕೃಷ್ಣಪ್ಪನ ಹೆಗಲ ಮೇಲೆಯೇ ಹೊರಿಸಿಬಿಟ್ಟ.

ಕೃಷ್ಣಪ್ಪ ದುಗ್ಗನಿದ್ದಲ್ಲಿಗೆ ಹೊರಡುವ ಸಿದ್ಧತೆ ಮಾಡಿಕೊಳ್ಳುವಾಗ ಸೂರ್ಯ ನಿಧಾನವಾಗಿ ಬಾನಂಚಿಗೆ ಸರಿಯುವ ಸಿದ್ಧತೆಯಲ್ಲಿದ್ದ. ಚಾವಡಿಯಿಂದ ಅಂಗಳಕ್ಕಿಳಿದಾಗ ಮಾಯಿಲ ಮಗನ ಮುಖವನ್ನೇ ಮಿಕಿ ಮಿಕಿ ದಿಟ್ಟಿಸುತ್ತಿದ್ದ. ಮಾಯಿಲನಿಗೆ ದುಗ್ಗನ ಹಣದ ಬಗ್ಗೆಯೇ ಚಿಂತೆ.

ಕೃಷ್ಣಪ್ಪ ಓಣಿ ದಾಟಿ ರಸ್ತೆಗಿಳಿದಾಗ, ಮಾಯಿಲನೂ ತಾನು ಭೂತದ ಬಾಡಿಗೆ ಒಡವೆಗೆ ಮುಂದಾಗಿ ಹೇಳಿ ಬರಲು ನಾರಾಯಣಾಚಾರಿ ಮನೆ ಕಡೆ ತೆರಳಿದ. ಬೀದಿಗಿಳಿದ ಕೃಷ್ಣಪ್ಪ, ದೇವದಾರು ಮರದಾಟಿ ಬಸ್ ಸ್ಟ್ಯಾಂಡಿಗೆ ಬರಬೇಕಾದರೆ ಸೋಮಪ್ಪನ ಗಡಂಗು ದಾಟಿಯೇ ಬರಬೇಕು. ಗಡಂಗು ದಾಟಿ ಮುಂದುವರಿಯಬೇಕಷ್ಟೇ; ಕೃಷ್ಣಪ್ಪನ ಕಾಲುಗಳು ಮುಂಚಲಿಸಲು ಒಪ್ಪುತ್ತಲೇ ಇಲ್ಲ. ಕೃಷ್ಣಪ್ಪ ಕೊನೆಗೂ ತನ್ನ ಕಾಲುಗಳಿಗೆ ಶರಣಾಗಿ ಸೋಮಪ್ಪನ ಗಡಂಗು ಹೊಕ್ಕೇ ಮೂಡಬಿದರೆಯ ಬಸ್ಸನ್ನೇರಿದ.

ಮೂಡಬಿದರೆಯಲ್ಲಿ ದುಗ್ಗನ ಮನೆ ಕೃಷ್ಣಪ್ಪನಿಗೆ ಅಪರಿಚಿತವೇನಲ್ಲ. ಬೀಡಿನ ಹೆಗಡೆಯವರ ಮನೆ ದಾಟಿ ಸಿಗುವ ನೇರ ಓಣಿಯಲ್ಲಿ ಕಾವಿಗಂಟೆ ನಡೆದರೆ ದುಗ್ಗನ ಮನೆ. ಮಾಯಿಲನ ಮನೆಯ ವರ್ಷಂಪ್ರತಿಯ ಹರಕೆ ಕೋಲಕ್ಕೆ ಕೋಲ ಕಟ್ಟುವವ ದುಗ್ಗನೇ. ಹಾಗೆಯೇ ಪ್ರತಿವರ್ಷ ದುಗ್ಗನನ್ನು ಮುಂದಾಗಿಯೇ ಹೇಳಿ ಬರಲು ದುಗ್ಗನಲ್ಲಿಗೆ ಬರುವವನೂ ಕೃಷ್ಣಪ್ಪನೇ.

ಕೃಷ್ಣಪ್ಪ ದುಗ್ಗನಲ್ಲಿಗೆ ಬಂದಾಗಲೆಲ್ಲಾ ದುಗ್ಗ ಮಾಯಿಲನ ಮನೆಯ ವರ್ಷದ ಸಂಗತಿಗಳನ್ನ ಮಾತ್ರವಲ್ಲ. ದನಕರುಗಳು... ಗದ್ದೆ ತೋಟಗಳ ಬಗ್ಗೆ ಕಳಕಳಿಯಿಂದ ವಿಚಾರಿಸುವುದುಂಟು. ಮಾಯಿಲನ ಆರೋಗ್ಯದಿಂದ ಹಿಡಿದು, ಗಂಡನ ಮನೆಯಲ್ಲಿರುವ ಆತನ ಹೆಣ್ಣುಮಕ್ಕಳ ಆರೋಗ್ಯ, ಮುಂಬೈಯಲ್ಲಿರುವ ಗಂಡುಮಕ್ಕಳ ಬಗ್ಗೆಯೂ ಕೂಲಂಕಷವಾಗಿ ವಿಚಾರಿಸುವ ಸೌಜನ್ಯ ದುಗ್ಗನಲ್ಲಿದೆ. ಮನೆಯಲ್ಲಿ ಎದ್ದವರ ಬಗ್ಗೆ ಬಿದ್ದವರ ಬಗ್ಗೆ ಎಲ್ಲವನ್ನೂ ಕೃಷ್ಣಪ್ಪ ದುಗ್ಗನಲ್ಲಿ ಹೇಳುವುದಿದೆ.

ಆದರೆ ಇತ್ತೀಚೆಗೆ ಎರಡು ಮೂರು ವರುಷಗಳಿಂದ ಕೃಷ್ಣನಿಗೆ ದುಗ್ಗನಲ್ಲಿ ಏನೋ ಅಸಮಾಧಾನ. 'ಅವನನ್ನೇ ಪ್ರತೀವರ್ಷ ಕೋಲ ಕಟ್ಟಲು ಯಾಕೆ ಹೇಳಬೇಕು? ಮನೆಯ ಹೆತ್ತ, ಸತ್ತ ಸುದ್ದಿ ಅವನಿಗೆ ಸಂಪೂರ್ಣ ತಿಳಿದಿರುತ್ತೆ, ಅದನ್ನೇ ಆತ ಆವೇಶ ಬಂದಾಗ ಬೊಗಳುತ್ತಾನೆ' ಎಂದು ಕೃಷ್ಣಪ್ಪ ಅನೇಕ ಬಾರಿ ಮಾಯಿಲನಲ್ಲಿ ವಾದಿಸಿದ್ದಿದೆ. ಆದರೆ ಮಾಯಿಲನ ವಾದವೇ ಬೇರೆ.

'ದುಗ್ಗನ ಅಪ್ಪ ಬಾಡ ನನ್ನ ಅಪ್ಪನ ಕಾಲದಿಂದಲೂ ಕಲ್ಲುರ್ಟಿಗೆ ಕೋಲ ಕಟ್ಟಿದವ, ನನ್ನ ಕಾಲದಿಂದಲೂ ಅವನ ಮಗ ದುಗ್ಗನೇ ಭೂತ ಕಟ್ಟುತ್ತಿರುವವ. ನಾನಿರುವವರೆಗೆ ನನ್ನ ಕಲ್ಲುರ್ಟಿಗೆ ದುಗ್ಗನೇ ಭೂತ ಕಟ್ಟಬೇಕು' ಎಂಬುದು ಮಾಯಿಲನ ವಾದ.